


ಕ್ರಿಕೆಟ್ ಸಂಭ್ರಮವೇ ಆಟದ ಅಂಗಳವಾಗಿ ರೂಪುಗೊಂಡಂತೆ ಕಾಣಿಸುವ ಕೋಲ್ಕತ್ತದ ಈಡನ್ ಗಾರ್ಡನ್ಸ್ ಕ್ರೀಡಾಂಗಣ

ಮೊದಲಾದರೆ ರಣಜಿ, ವಿಜಯ ಹಜಾರೆ, ಸಿ.ಕೆ. ನಾಯ್ಡು, ಇರಾನಿ – ಹೀಗೆ ಪ್ರಮುಖ ದೇಶಿ ಟೂರ್ನಿಗಳಲ್ಲಿ ಆಡಿದ ಬಳಿಕವಷ್ಟೇ ರಾಷ್ಟ್ರೀಯ ಕ್ರಿಕೆಟ್ ತಂಡದ ಬಾಗಿಲು ತಟ್ಟಲು ಅವಕಾಶವಿತ್ತು. ಆದರೆ ಈಗ ಐಪಿಎಲ್‌ನಲ್ಲಿ ನೀಡುವ ಪ್ರದರ್ಶನ ರಾತ್ರೋ ರಾತ್ರಿ ಆಟಗಾರರ ಬದುಕು ಬದಲಿಸುತ್ತದೆ. ಆಟಗಾರರ ಮನೋಬಲವನ್ನೂ ಹೆಚ್ಚಿಸುತ್ತಿದೆ. ಐಪಿಎಲ್ ಆಡಿ ಮಿಂಚಿದರೆ ಸಾಕು, ಭಾರತ ತಂಡದಲ್ಲಿ ಅವಕಾಶಗಳು ಸಿಗುತ್ತಿವೆ.

ಐಪಿಎಲ್ ಆರಂಭವಾದ ಕೆಲವೇ ವರ್ಷಗಳಲ್ಲಿ ಅನೇಕ ಕ್ರೀಡೆಗಳ ಲೀಗ್‌ಗಳು ಆರಂಭವಾದರೂ ಕಬಡ್ಡಿ ಹೊರತುಪಡಿಸಿ ಉಳಿದ ಕ್ರೀಡೆಗಳ ಚುಟುಕು ಮಾದರಿ ಜನಪ್ರಿಯತೆಯ ಉತ್ತುಂಗಕ್ಕೆ ಏರಲಿಲ್ಲ. ಐಪಿಎಲ್ ವಿಶ್ವದ ಅತ್ಯಂತ ಜನಪ್ರಿಯ ಮತ್ತು ಆರ್ಥಿಕವಾಗಿ ಯಶಸ್ವಿಯಾದ ಟೂರ್ನಿ. ಜಾಗತಿಕ ಮಟ್ಟದಲ್ಲಿ ಪ್ರೇಕ್ಷಕರನ್ನು ಆಕರ್ಷಿಸುವ ವೇಗದ ಗತಿಯ ಮತ್ತು ಮನರಂಜನೆಯ ಸ್ವರೂಪವನ್ನು ಪರಿಚಯಿಸಿ ಕ್ರಾಂತಿ ಮಾಡಿತು.

2008ರಲ್ಲಿ ಐಪಿಎಲ್ ಆರಂಭವಾದ ಬಳಿಕ ಈ ಮಾದರಿ ಕಡಿಮೆ ಅವಧಿಯಲ್ಲಿ ಆಧುನಿಕ ಕ್ರಿಕೆಟ್ ಮೇಲೆ ಆಳವಾದ ಪ್ರಭಾವ ಬೀರಿದೆ. ಫ್ರಾಂಚೈಸ್ ಆಧಾರಿತ ಸ್ವರೂಪದ ಆಟವನ್ನು ಆಡುವ ಮತ್ತು ಗ್ರಹಿಸುವ ರೀತಿ ಆಟಕ್ಕೆ ಹೊಸ ಆಯಾಮ ನೀಡಿದೆ. ಇದು ಯುವ ಪ್ರತಿಭೆಗಳ ಭವಿಷ್ಯ ರೂಪಿಸುವ ಕೇಂದ್ರವಾಗಿದೆ. ಅಂತರರಾಷ್ಟ್ರೀಯ ಮಟ್ಟದ ಟೂರ್ನಿಗಳನ್ನು ಆಡುವಾಗ ಪರಸ್ಪರ ಎದುರಾಳಿಗಳಾಗಿರುತ್ತಿದ್ದ ವಿವಿಧ ದೇಶಗಳ ಆಟಗಾರರು ಐಪಿಎಲ್ ಭೂಮಿಕೆಯಲ್ಲಿ ಒಂದೇ ತಂಡವಾಗಿ ಆಡುವ ಖುಷಿ ಎಲ್ಲ ದೇಶಗಳ ಆಟಗಾರರಿಗೂ ಸಿಗುತ್ತಿದೆ. ಟ್ವೆಂಟಿ–20 ಮಾದರಿಯನ್ನು ಜನಪ್ರಿಯಗೊಳಿಸುವಲ್ಲಿ, ಜಾಗತಿಕವಾಗಿ ಹೊಸ ಆಲೋಚನೆಗೆ ನಾಂದಿ ಹಾಡಿದ ಹೆಗ್ಗಳಿಕೆ ಈ ಮಾದರಿ ಹೊಂದಿದೆ. ಇದು ಆಧುನಿಕ ಕ್ರಿಕೆಟ್‌ನ ವಿಕಾಸದ ಭಾಗವಾಗಿದೆ.

## ಟೀಕೆ ಟಿಪ್ಪಣಿಗಳ ನಡುವೆ...

ಐಪಿಎಲ್ ಆರಂಭವಾದ ದಿನದಿಂದಲೇ ಅನೇಕ ಟೀಕೆ–ಟಿಪ್ಪಣಿಗಳನ್ನು ಆಟಗಾರರು, ಕ್ರಿಕೆಟ್ ಮಂಡಳಿ ಹಾಗೂ ಫ್ರಾಂಚೈಸ್‌ಗಳು ಎದುರಿಸುತ್ತಲೇ ಬಂದಿದ್ದಾರೆ. ಚುಟುಕು ಕ್ರಿಕೆಟ್ ಆಟವೇ ಅಲ್ಲ; ಇಲ್ಲಿ ಆಟಕ್ಕಿಂತ ಮನರಂಜನೆಯೇ ಪ್ರಧಾನವಾಗಿದ್ದು, ಇದು ಯುವ ಆಟಗಾರರ ಶಕ್ತಿ ಕೊಲ್ಲುತ್ತಿದೆ ಎನ್ನುವ ಟೀಕೆಗಳು ಸಾಮಾನ್ಯವಾಗಿವೆ. ಅನೇಕ ಕ್ರಿಕೆಟ್ ವಿಶ್ಲೇಷಕರು 'ಟೆಸ್ಟ್ ಪಂದ್ಯದ ಮಹತ್ವವನ್ನು ಐಪಿಎಲ್ ಹೆಚ್ಚಿಸಿದೆ. ಮೊದಲು ಟೆಸ್ಟ್ ಎಂದರೆ ಬಹಳಷ್ಟು ಫಲಿತಾಂಶಗಳು ಡ್ರಾ ಆಗಿರುತ್ತಿದ್ದವು. ಐಪಿಎಲ್‌ನ ಆಕ್ರಮಣಕಾರಿ ಆಟದ ಪ್ರಭಾವ ಟೆಸ್ಟ್ ಮಾದರಿಯ ಮೇಲೂ ಆಗಿದ್ದು, ಅಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ನಿಶ್ಚಿತ ಫಲಿತಾಂಶ ಹೊರಹೊಮ್ಮುತ್ತಿದೆ' ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಏನೇ ಟೀಕೆಗಳಿದ್ದರೂ ಜಗತ್ತಿನ ಕ್ರಿಕೆಟ್ ನಕಾಶೆಯಲ್ಲಿ ಹೊಸ ಅಲೆ ಹುಟ್ಟುಹಾಕಿದ ಐಪಿಎಲ್ ಅನೇಕ ಬದಲಾವಣೆಗಳನ್ನು ತಂದಿದೆ. ಬ್ಯಾಟಿಂಗ್, ಬೌಲಿಂಗ್ ಹಾಗೂ ಕ್ಷೇತ್ರರಕ್ಷಣೆ ಅಭ್ಯಾಸಕ್ಕೆ ಸಾಂಪ್ರದಾಯಿಕ ಸಿದ್ಧಸೂತ್ರಕ್ಕೆ ಅಂಟಿಕೊಂಡಿದ್ದ ಆಟಗಾರರು ಹಾಗೂ ಕ್ರಿಕೆಟ್ ಆಡುವ ರಾಷ್ಟ್ರಗಳ